ಆಸೆಯೇ ಕಾರಣ.

ಹೀಗೊಮ್ಮೆ ಆಲೋಚನೆ ಮಾಡಿ, ನಿಮ್ಮ ತಂದೆ ತಾಯಿಯರಿಗೆ 'ನೀವು ವೃದ್ಧಾಪ್ಯದಲ್ಲಿ ಅವರನ್ನು ನೋಡಿಕೊಳ್ಳಿರಿ' ಎಂಬ ಆಸೆಯೇ ಇರಲಿಲ್ಲವೆಂದಾದಲ್ಲಿ, ನಿಮ್ಮನ್ನು ಓದಿಸಿ ನಿಮ್ಮ ಉದ್ಧಾರಕ್ಕೆ ಕಾರಣವಾಗುವ ಕಷ್ಟವನ್ನೇ ಅವರು ತೆಗೆದುಕೊಳ್ಳುತ್ತಿರಲಿಲ್ಲ ಅಲ್ಲವೇ?

ಅಂದರೆ, ಪ್ರತಿಯೊಂದು ಕ್ರಿಯೆಯ ಹಿಂದೆಯೂ ಆಸೆ ಅನ್ನುವುದು ಇದ್ದೇ ಇರುತ್ತದೆ. 'ಆಸೆಯೇ ದುಃಖಕ್ಕೆ ಕಾರಣ' ಅಂತ ಹೇಳಿದ ಬುದ್ಧ 'ನನಗೆ ಆಸೆಯೇ ಇರಲಿಲ್ಲ' ಅಂತೇನಾದರೂ ಹೇಳಿದ್ದರೆ ಅವನು ಆತ್ಮವಂಚನೆ ಮಾಡಿಕೊಳ್ಳುತ್ತಿದ್ದಾನೆ ಅಂತಲೇ ಅರ್ಥ. ಯಾಕೆಂದರೆ, ತನ್ನ ಅನಿಸಿಕೆಗಳನ್ನು ತಾನು ಬೋಧಿವೃಕ್ಷದ ಅಡಿಯಲ್ಲಿ ಕುಳಿತು ಕಂಡುಕೊಂಡ ಜ್ಞಾನವನ್ನು ಜಗತ್ತಿಗೆ ಸಾರಬೇಕೆಂಬ ಆಸೆ ಅವನಲ್ಲಿ ಇತ್ತು!

**ಹಸಿದರವ ತಿನ್ನುವ ಆಸೆಯಿಂದಾಗಿಯೇ ಹೋಟೆಲಿನವರು ದಿನಸಿ ಅಂಗಡಿಗಳ ವರ್ತಕರು, ರೈತರು – ಹೀಗೆ ಅನೇಕ ಸಮುದಾಯದವರು ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ಅಂದರೆ, ಎಲ್ಲ ರೀತಿಯ ಅರ್ಥವ್ಯವಸ್ಥೆಯ ಬುನಾದಿ ಆಸೆಯಲ್ಲದೆ ಇನ್ನಾವುದೂ ಅಲ್ಲ ಅನ್ನುವುದು ಸ್ಪಷ್ಟ.**

ತಪಸ್ಸಿಗೆ ಕುಳಿತ ಋಷಿಗೆ ಕೂಡ ಮುಕ್ತಿಯ ಆಸೆ ಇರುತ್ತದೆ. ದಾನ – ಧರ್ಮಗಳನ್ನು ಮಾಡುವ ಧನಿಕನಿಗೂ ಸ್ವರ್ಗದ ಆಸೆ ಇರುತ್ತದೆ. ನೆಲದ ಮೇಲೆ ಹರಿಯುತ್ತಿರುವ ನದಿಗೂ ಸಾಗರವನ್ನು ಸೇರಬೇಕೆಂಬ ಆಸೆ ಇರಬಹುದೆಂದು ನಾನು ಹೇಳಿದರೆ ನೀವು ನಂಬದೆ ಇರುತ್ತೀರಾ? ಹೀಗಾಗಿ ಋಷಿಯ ತಪಸ್ಸಿರಲಿ, ಧನಿಕನ ದಾನ – ಧರ್ಮಗಳಿರಲಿ, ನದಿಯ ಹರಿಯುವಿಕೆಯಿರಲಿ – ಇವುಗಳ ಹಿಂದಿರುವ ಶಕ್ತಿ ಪ್ರಬಲವಾದ ಆಸೆಯೇ!

ಇನ್ನೊಂದು ವಿಚಾರದ ಕಡೆ ನಿಮ್ಮ ಗಮನ ಸೆಳೆಯುತ್ತೇನೆ. ರೋಗಿಯೊಬ್ಬನ ಬದುಕಿ, ಆರೋಗ್ಯವಂತನಾಗಿ ಬಾಳಬೇಕೆಂಬ ಆಸೆಯೇ ವೈದ್ಯನ ಜೀವನ ನಿರ್ವಹಣೆಗೆ ಆಸರೆಯಾಗುತ್ತದೆ. ಹಾಗೆಯೇ, ರೋಗಿಯ ಬದುಕುವ ಆಸೆಯಿಂದಾಗಿಯೇ ಔಷಧದ ಅಂಗಡಿಯವರು ಔಷಧ ತಯಾರಿಕಾ ಕಂಪೆನಿಗಳವರೂ ಬದುಕಲು ಕಾರಣವಾಗುತ್ತದೆ.

'ನಾನು ಸತ್ತರೆ ಸಾಯ್ತೀನಿ, ಪರವಾಗಿಲ್ಲ ಬಿಡಿ. ಇನ್ನು ಬದುಕಿದ್ದು ಕಿಸಿಯಬೇಕಾದುದ್ದೇನೂ ಇಲ್ಲ. ಡಾಕ್ಟರೂ ಬೇಡ. ಯಾವ ಸುಡುಗಾಡೂ ಬೇಡ ಅಂತ ನಿರಾಸೆಯಿಂದ ರೋಗಿಗಳೆಲ್ಲಾ ಹೇಳಿಕೊಂಡು ಸುಮ್ಮನಿದ್ದರೆ, ರೋಗಿಗಳನ್ನೇ, ರೋಗಗಳನ್ನೇ ನಂಬಿಕೊಂಡು ಬದುಕುತ್ತಿರುವ ವೈದ್ಯರ, ಔಷಧದ ಅಂಗಡಿಗಳ, ಔಷಧ ತಯಾರಕರ ಗತಿ ಏನು?

ಹಸಿದರವ ತಿನ್ನುವ ಆಸೆಯಿಂದಾಗಿಯೇ ಹೋಟೆಲಿನವರು ದಿನಸಿ ಅಂಗಡಿಗಳ ವರ್ತಕರು, ರೈತರು – ಹೀಗೆ ಅನೇಕ ಸಮುದಾಯದವರು ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ಅಂದರೆ, ಎಲ್ಲ ರೀತಿಯ ಅರ್ಥವ್ಯವಸ್ಥೆಯ ಬುನಾದಿ ಆಸೆಯಲ್ಲದೆ ಇನ್ನಾವುದೂ ಅಲ್ಲ ಅನ್ನುವುದು ಸ್ಪಷ್ಟ. ಹೀಗಾಗಿ, ಆಸೆಯೇ ದುಃಖಕ್ಕೆ ಕಾರಣ ಅಂತ ನಕಾರಾತ್ಮಕ ಹೇಳಿಕೆಯನ್ನು ಹೊರಗೆಡಹಿದ